ಆ) 1996-97ನೇ ಸಾಲಿನಲ್ಲಿ ಎಷ್ಟು ಲಕ್ಷದ ರಸ್ತೆ ಕಾಮಗಾರಿಯನ್ನು ನಿಗದಿಪಡಿಸಲಾಗುವುದು?

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):-

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜನವರಿ 1996ರಿಂದ ಮಾರ್ಚ್ 31ರ ಅವಧಿಯಲ್ಲಿ ಸಂಪರ್ಕ ರಸ್ತೆಗಳನ್ನು ನಿರ್ಮಾಣ ಮಾಡಿರುವುದಿಲ್ಲ.

ಆ) 1995-96ನೇ ಸಾಲಿನಲ್ಲಿ ಪ್ರಾರಂಭಿಸಿರುವ ರಸ್ತೆಗಳ ಕಾಮಗಾರಿಗಳು ಪೂರ್ಣಗೊಂಡ ನಂತರ 1996-97ನೇ ಸಾಲಿಗೆ ಸಂಬಂಧಿಸಿದ ರಸ್ತೆಗಳ ಕಾಮಗಾರಿಗಳನ್ನು ತೆಗೆದುಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.

ವಿಷಯ:- ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂ ಸುಧಾರಣಾ ಕಾಯ್ದೆಯಿಂದ ತೊಂದರೆಗೊಳಗಾದ ಭೂ ಮಾಲೀಕರಿಗೆ ಪರಿಹಾರ.

1158 (1682) ಯು.ಆರ್. ಸಭಾಪತಿ (ಉಡುಪಿ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂ ಸುಧಾರಣಾ ಕಾಯ್ದೆಯಿಂದ ತೊಂದರೆಗೊಳಗಾದ ಭೂ ಮಾಲೀಕರಿಗೆ ನೀಡಲಾಗಿರುವ ಮತ್ತು ನೀಡಬೇಕಾಗಿರುವ ಪರಿಹಾರ ಧನ ಎಷ್ಟು? (ವಿವರ ನೀಡುವುದು);

ಆ) ಸದರಿಯವರಿಗೆ ಪರಿಹಾರ ಧನ ವಿತರಿಸುವ ಬಗ್ಗೆ ಸರ್ಕಾರದವರು ಕೂಡಲೇ ಕ್ರಮ ತೆಗೆದುಕೊಳ್ಳುವರೇ? (ವಿವರ ನೀಡುವುದು).

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):-

ಅ) ನಗದಾಗಿ ನೀಡಿರುವ ಪರಿಹಾರ

ಎನ್‌ಎಸ್‌ಸಿ ಮೂಲಕ	ಬಡ್ಡಿ ಪಾವತಿ
ರೂ.	ರೂ.
9,96,03,666	2,32,73,662	59,66,052

ಒಟ್ಟು ರೂ. 12,88,43,380-00

ನೀಡಬೇಕಾದ ಪರಿಹಾರ : ಪ್ರಸ್ತುತ ನಿಗದಿಪಡಿಸಿದಂತೆ ಈ ಕೆಳಗಿನಂತೆ ಪರಿಹಾರ ಪಾವತಿಗೆ ಬಾಕಿ ಇರುವುದು.

ನಗದು ರೂಪದಲ್ಲಿ	ಎಸ್. ಎಸ್. ಸಿ ಮೂಲಕ
ರೂ. 267 ಲಕ್ಷ	ರೂ. 72 ಲಕ್ಷ

ಆ) ಹೌದು, ಈಗ ಹಾಲಿ 7 ತಾಲ್ಲೂಕುಗಳಿಂದ 38 ಪ್ರಕರಣಗಳಲ್ಲಿ ಪರಿಹಾರ ಸಂದಾಯಕ್ಕಾಗಿ ಅರ್ಜಿಗಳು ಬಂದಿದ್ದು, ಅವು ಪರಿಶೀಲನಾ ಹಂತದಲ್ಲಿವೆ.

ಮಾಜಿ ಭೂ ಮಾಲೀಕರ ವಿಳಾಸ ಲಭ್ಯವಿಲ್ಲದೇ ಇರುವುದು ಸಲ್ಲತಕ್ಕ ಪರಿಹಾರ ಕಡಿಮೆ ಮೊತ್ತವಾಗಿದ್ದು, ಇದನ್ನು ಪಡೆಯಲು ನಮೂನೆ 9 'ಸಿ' ನಲ್ಲಿ ಅರ್ಜಿ ಸಲ್ಲಿಸದೇ ಇರುವುದು, ಮೃತಪಟ್ಟ ಭೂ

ಮಾಲೀಕರ ವಿಳಾಸವಿಲ್ಲದೆ ಅರ್ಜಿ ಹಾಕದೇ ಇರುವುದು, ಸುಮಾರು 4,032 ಪ್ರಕರಣ ಉಚ್ಚ ನ್ಯಾಯಾಲಯಕ್ಕೆ ಹೋಗಿರುವುದು - ಇವುಗಳು ಪರಿಹಾರ ಪಾವತಿಗೆ ಮುಖ್ಯ ತೊಡಕುಗಳಾಗಿವೆ.

ಆದಾಗ್ಯೂ ವಿಶೇಷ ಕಾರ್ಯಕ್ರಮ ಹಮ್ಮಿಕೊಂಡು ಬಾಕಿ ಉಳಿದಿರುವ ಪರಿಹಾರ ಪಾವತಿಸಲು ಕ್ರಮ ಕೈಗೊಳ್ಳಲಾಗಿದೆ.

ವಿಷಯ:- ಕರ್ನಾಟಕ ಗೃಹ ಮಂಡಳಿ ನೌಕರರ ಬೇಡಿಕೆಗಳು.

1161 (2047) **ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ):-** ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ಗೃಹ ಮಂಡಳಿ ನೌಕರರು, ಸರ್ಕಾರಕ್ಕೆ ಹಲವಾರು ಬೇಡಿಕೆಗಳನ್ನು ಸಲ್ಲಿಸಿರುವುದು ನಿಜವೇ?

ಆ) ಆ ಬೇಡಿಕೆಗಳು ಯಾವುವು?

ಇ) ಬೇಡಿಕೆಗಳನ್ನು ಈಡೇರಿಸುವ ಬಗ್ಗೆ ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು):-

ಅ) ಹೌದು,

ಆ) ಬೇಡಿಕೆಗಳ ವಿವರಗಳನ್ನು ಅನುಭಂಧದಲ್ಲಿ ನೀಡಲಾಗಿದೆ.

ಇ) ಸದರಿ ಬೇಡಿಕೆಗಳ ಬಗ್ಗೆ ಈಗಾಗಲೇ ಅಂದರೆ ದಿನಾಂಕ:1-7-96 ರಂದು ವಸತಿ ಇಲಾಖೆ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಸಲಾಗಿದ್ದು, ಸದರಿ ಸಭೆ ನಡೆವಳಿಗಳ ಪ್ರಕಾರ ಮುಂದಿನ ಕ್ರಮ ಕೈಗೊಳ್ಳಲಾಗುತ್ತಿದೆ.

ಅನುಬಂಧ

ಕರ್ನಾಟಕ ಗೃಹ ಮಂಡಳಿಯ ನೌಕರರ ಬೇಡಿಕೆಗಳು.

1) ಸಿ ಅಂಡ್ ಆರ್ ಪ್ರಕಾರ ಶೇಕಡ 50 ರಷ್ಟು ಎರವಲು ಸೇವೆಯನ್ನು ವಾಪಸ್ಸು ಕಳುಹಿಸುವುದರ ಬಗ್ಗೆ.

2) ಕಂದಾಯ ಅಧಿಕಾರಿಯವರನ್ನು ವಿಭಾಗದಲ್ಲೇ ನೇಮಿಸುವುದರ ಬಗ್ಗೆ.

3) ಬೋನಸ್ ನೀಡುವುದರ ಬಗ್ಗೆ.

4) 25 ಜನ ನೌಕರರಿಗೆ ಕಾಲಿಕ ವೇತನವನ್ನು ನೀಡುವ ಬಗ್ಗೆ.

5) ಕೆಂಪಾಪುರದಲ್ಲಿನ ಬಾಡಿಗೆ ವಸತಿ ಗೃಹಗಳನ್ನು ಸ್ವಂತಕ್ಕೆ ನೀಡುವುದರ ಬಗ್ಗೆ.

6) ಕಾಲಿಕ ವೇತನ ನೌಕರರನ್ನು ಖಾಯಂ ಮಾಡುವ ಬಗ್ಗೆ.

7) 5 ವರ್ಷ ಸೇವೆ ಸಲ್ಲಿಸಿದ ದಿನಗೂಲಿ ನೌಕರರಿಗೆ ಕಾಲಿಕ ವೇತನ ನೀಡುವುದರ ಬಗ್ಗೆ.

8) 2ನೇ ಹಂತದ ವಿಕೇಂದ್ರಿಕರಣ ಮಾಡುವುದರ ಬಗ್ಗೆ.